56

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ. ಪ್ರತಾಪ್ ಸಿಂಹ ನಾಯಕ್ .ಕೆ., ರವರು ನಿಯಮ 72 ರಡಿ ಪ್ರಸ್ತಾಪಿಸಿರುವ ವಿಷಯಕ್ಕೆ ಉತ್ತರ**

**ವಿಷಯ:** ರಾಜ್ಯದ ಕರಾವಳಿ ಮತ್ತು ಮಲೆನಾಡು ಪ್ರದೇಶದಲ್ಲಿ ನಿರಂತರವಾಗಿ ನಾಲ್ಕು ತಿಂಗಳು ಸುರಿದ ಮಳೆ ಮತ್ತು ಅದರಿಂದ ಕಾಡಿದ ಕೊಳೆ ರೋಗದಿಂದಾಗಿ ವ್ಯಾಪಕವಾಗಿ ಬೆಳೆ ಹಾನಿ ಆಗವುದರ ಜೊತೆಗೆ ಅಡಕೆ ಇಳುವರಿ ಗಣನೀಯವಾಗಿ ಕುಂಠಿತಗೊಂಡಿರುವುದರಿಂದ, ಅಡಕೆ ಬೆಳೆಗಾರರು ತೀವ್ರ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದಾರೆ. ಪ್ರತಿ ವರ್ಷ ಕೊಳೆ ರೋಗದ ಆತಂಕ ಇದ್ದರೂ, ಈ ಸಲದ ಮಳೆಗಾಲ ಮಾತ್ರ ಅಡಕೆ ಬೆಳೆಗಾರರಿಗೆ ಬೆಳೆ ಮತ್ತು ಆದಾಯದಲ್ಲಿ ದೊಡ್ಡ ಹೊಡೆತ ನೀಡಿದೆ.

ಅಡಕೆ ಬೆಳೆಯುವ ಪ್ರಮುಖ ಪ್ರದೇಶಗಳಲ್ಲಿ ಈ ಬಾರಿ ಬೆಳೆಯ ಪ್ರಮಾಣ ಸುಮಾರು ಶೇ.40 ರಷ್ಟು ನಷ್ಟ ಆಗಿದ್ದು, ಈ ಸಂಕಷ್ಟದ ಪರಿಸ್ಥಿತಿಯಲ್ಲಿ ಬೆಳೆಗಾರರ ಹಿತರಕ್ಷಣೆಗೆ ಸರ್ಕಾರ ಇದುವರೆಗೆ ಯಾವುದೇ ಕ್ರಮ ವಹಿಸದೇ ಇರುವುದರಿಂದ ಉಂಟಾಗಿರುವ ಗಂಭೀರ ಸಮಸ್ಯೆ ಕುರಿತು ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರ ಗಮನವನ್ನು ಸೆಳೆಯಲು ಬಯಸುತ್ತೇನೆ.

**ಉತ್ತರ:** ರಾಜ್ಯದಲ್ಲಿ ಅಡಿಕೆ ಬೆಳೆಯನ್ನು 6.89 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯಲಾಗುತ್ತಿದ್ದು, ಇದರ ಉತ್ಪಾದನೆ ಅಂದಾಜು 10.46ಲಕ್ಷ ಮೆಟ್ರಿಕ್‌ಟನ್ ಗಳಾಗಿರುತ್ತದೆ. ಅಡಿಕೆ ಬೆಳೆಯನ್ನು ರಾಜ್ಯದಲ್ಲಿ ಪ್ರಮುಖವಾಗಿ ಶಿವಮೊಗ್ಗ, ದಕ್ಷಿಣ ಕನ್ನಡ, ತುಮಕೂರು, ಹಾಸನ, ಚಿಕ್ಕಮಗಳೂರು, ದಾವಣಗೆರೆ, ಚಿತ್ರದುರ್ಗ, ಉತ್ತರಕನ್ನಡ, ಕೊಡಗು ಜಿಲ್ಲೆಗಳಲ್ಲಿ ಬೆಳೆಯಲಾಗುತ್ತಿದೆ. ಪ್ರಸಕ್ತ ಸಾಲಿನಲ್ಲಿ ಹವಾಮಾನ ವೈಪರೀತ್ಯದಿಂದಾಗಿ ವಾತಾವರಣದಲ್ಲಿ ಕಡಿಮೆ ಉಷ್ಣಾಂಶ (20 ರಿಂದ 25 ಡಿಗ್ರಿ ಸೆಂಟಿ ಗ್ರೇಡ್‌ಗಿಂತ ಕಡಿಮೆ), ಅಧಿಕ ತೇವಾಂಶ ಶೇ 90% ಕ್ಕಿಂತ ಹೆಚ್ಚು ಹಾಗೂ ಮಳೆಯ ಏರು ಪೇರುನಿಂದಾಗಿ ಮೋಡ ಕವಿದ ವಾತಾವರಣದಿಂದ ಅಡಿಕೆ ಬೆಳೆಯು ಹಾನಿಗೊಳಗಾಗಿದೆ.

**ಅಡಿಕೆ ಕೊಳೆ ರೋಗಕ್ಕೆ ಹಾನಿಯಾದ ಜಿಲ್ಲಾವಾರು ವಿವರ ಕೆಳಕಂಡಂತಿರುತ್ತದೆ:-**

| ಕ್ರಮ ಸಂಖ್ಯೆ. | ಜಿಲ್ಲೆ | ಬೆಳೆಯ ವಿಸ್ತೀರ್ಣ ( ಹೆಕ್ಟೇರ್ ಗಳಲ್ಲಿ) | ಹಾನಿಗೊಳಗಾದ ಕೊಳೆ ರೋಗ ವಿಸ್ತೀರ್ಣ (ಹೆಕ್ಟೇರ್‌ಗಳಲ್ಲಿ) | NDRF/SDRF ಮಾರ್ಗಸೂಚಿಯಂತೆ ಬಹುವಾರ್ಷಿಕ ತೋಟಗಾರಿಕೆ ಬೆಳೆಗಳಿಗೆ ಪ್ರತಿ ಹೆಕ್ಟೇರ್ ಗೆ ರೂ.22,500ಗಳಂತೆ ಪರಿಕರಗಳ ಮೊತ್ತ ( Inputs Subsidy ) (ರೂ, ಲಕ್ಷಗಳಲ್ಲಿ ) |
|---|---|---|---|---|
| 1. | ಶಿವಮೊಗ್ಗ | 121261 | 32757 | 7370.32 |
| 2. | ಚಿಕ್ಕಮಗಳೂರು | 85579 | 25004 | 5625.90 |
| 3. | ಉತ್ತರಕನ್ನಡ | 35219 | 17422.67 | 3920.10 |
| 4. | ಕೊಡಗು | 29450 | 3110 | 699.75 |
| 5. | ದಕ್ಷಿಣ ಕನ್ನಡ | 109669 | 830 | 186.75 |
| | ಒಟ್ಟು | 381178 | 79123.67 | 178.03 |

ಅಡಿಕೆ ಕೊಳೆ ರೋಗ ಬಾಧಿತ ರೈತರಿಗೆ ಪರಿಹಾರ ಒದಗಿಸಲು **NDRF/SDRF ಮಾರ್ಗಸೂಚಿಯನ್ವಯ ಬೆಳೆ ಹಾನಿಯಾಗಿರುವ ಅಂದಾಜು 79123.67 ಹೆಕ್ಟೇರ್ ಪ್ರದೇಶಕ್ಕೆ ಪ್ರತಿ ಹೆಕ್ಟೇರ್ ಗೆ ರೂ.22,500/-ಗಳಂತೆ** ಕೇಂದ್ರ ಸರ್ಕಾರಕ್ಕೆ **ರೂ.178.03** ಕೋಟಿಗಳ ಪ್ರಸ್ತಾವನೆಯನ್ನು ಸಲ್ಲಿಸಲಾಗಿದ್ದು, ಪರಿಶೀಲನೆಯಲ್ಲಿರುತ್ತದೆ.

**ಅಡಿಕೆ ಕೊಳೆರೋಗದಿಂದ ಬಾಧಿತವಾದ ಅಡಿಕೆ ಬೆಳೆಗಾರರ ನೆರವಿಗೆ ಕೈಗೊಂಡ ಕ್ರಮಗಳು ಕೆಳಕಂಡಂತಿವೆ.**

1. ರಾಷ್ಟ್ರೀಯ ತೋಟಗಾರಿಕೆ ಮಿಶನ್ ಯೋಜನೆಯಡಿ ಅಡಿಕೆ ಬೆಳೆ ಸೇರಿದಂತೆ ಸಮಗ್ರ ರೋಗ/ಕೀಟಗಳ ಹಾಗೂ ಪೋಷಕಾಂಶಗಳ ನಿರ್ವಹಣೆಗಾಗಿ ಘಟಕ ವೆಚ್ಚದ ರೂ.4,000 ಗಳಲ್ಲಿ ಶೇ.30 ರಂತೆ, ಪ್ರತಿ ಹೆಕ್ಟೇರ್ ಗೆ ರೂ.1,200 ಗಳಂತೆ 4 ಹೆಕ್ಟೇರ್ ವರೆಗೆ ಗರಿಷ್ಠ ರೂ.4,800 ಗಳ ಸಹಾಯಧನ ನೀಡಲಾಗುತ್ತಿದೆ. ಈ ಕಾರ್ಯಕ್ರಮಕ್ಕಾಗಿ ಕೊಳೆ ರೋಗ ಬಾಧಿತ ಜಿಲ್ಲೆಗಳಿಗೆ ಈ ಕೆಳಗಿನಂತೆ ಅನುದಾನ ಒದಗಿಸಲಾಗಿದ್ದು, ಈವರೆಗೂ ಅಂದಾಜು 3,809 ಫಲಾನುಭವಿಗಳಿಗೆ ಸಹಾಯಧನ ನೀಡಲಾಗಿರುತ್ತದೆ.

| ಕ್ರ.ಸಂ. | ಜಿಲ್ಲೆ | ಮೊತ್ತ ರೂ.ಲಕ್ಷಗಳಲ್ಲಿ |
|---|---|---|
| 1. | ಚಿಕ್ಕಮಗಳೂರು | 12.00 |
| 2. | ಶಿವಮೊಗ್ಗ | 12.00 |
| 3. | ಉತ್ತರ ಕನ್ನಡ | 8.60 |
| 4. | ದಕ್ಷಿಣ ಕನ್ನಡ | 8.52 |
| 5. | ಕೊಡಗು | 4.80 |
| | **ಒಟ್ಟು** | **45.92** |

2. ತೋಟಗಾರಿಕೆ ಬೆಳೆಗಳ ಕೀಟ ಮತ್ತು ರೋಗಗಳ ಸಮಗ್ರ ನಿಯಂತ್ರಣ ಯೋಜನೆಯಡಿ ಅಡಿಕೆ ಬೆಳೆ ಸೇರಿದಂತೆ ಇತರೆ ತೋಟಗಾರಿಕೆ ಬೆಳೆಗಳಿಗೆ ಘಟಕ ವೆಚ್ಚ ಪ್ರತಿ ಹೆಕ್ಟೇರ್ ಗೆ ರೂ.10,000/- ಗಳಲ್ಲಿ ಸಾಮಾನ್ಯ ವರ್ಗದವರಿಗೆ ಶೇ.75 ರಂತೆ ರೂ.7,500/- ಗಳು ಹಾಗೂ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದವರಿಗೆ ಶೇ. 90ರಷ್ಟು ರೂ. 9,000/- ಗಳಂತೆ ಸಸ್ಯ ಸಂರಕ್ಷಣೆ ಔಷಧಿಗಳ ಸಹಾಯಧನ ನೀಡಲಾಗುತ್ತಿದೆ. ಪ್ರಸಕ್ತ ಸಾಲಿನಲ್ಲಿ ರೂ.340.00 ಲಕ್ಷಗಳನ್ನು ವಿನಿಯೋಗಿಸಲಾಗಿದ್ದು, ಅಡಿಕೆ ಕೊಳೆ ರೋಗ ಬಾಧಿತ ಜಿಲ್ಲೆಗಳಿಗೆ ಈ ಕೆಳಗಿನಂತೆ ಅನುದಾನವನ್ನು ಒದಗಿಸಿ, ಅಂದಾಜು 2671 ಫಲಾನುಭವಿಗಳಿಗೆ ಸಹಾಯಧನ ನೀಡಲಾಗಿದೆ:-

| ಕ್ರ.ಸಂ. | ಜಿಲ್ಲೆ | ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|
| 1. | ಚಿಕ್ಕಮಗಳೂರು | 47.00 |
| 2. | ಶಿವಮೊಗ್ಗ | 40.00 |
| 3. | ಉತ್ತರ ಕನ್ನಡ | 18.00 |
| 4. | ದಕ್ಷಿಣ ಕನ್ನಡ | 30.00 |
| 5. | ಹಾಸನ | 52.00 |
| | **ಒಟ್ಟು** | **187.00** |

3. ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಶಿವಮೊಗ್ಗದ ತಜ್ಞರು ಹಾಗೂ ಇಲಾಖೆಯ ಅಧಿಕಾರಿಗಳ ಸಹಯೋಗದೊಂದಿಗೆ ಕೈಪಿಡಿ, ಕರಪತ್ರಗಳು ಮತ್ತಿತರೆ ಸಮೂಹ ಮಾಧ್ಯಮಗಳ ಮೂಲಕ ಪ್ರಚಾರ ಕೈಗೊಳ್ಳಲಾಗುತ್ತಿದೆ.

HORTI 59 HGM 2025

**(ಎಸ್.ಎಸ್.ಮಲ್ಲಿಕಾರ್ಜುನ್)**
ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು